


ಮೊದಲು ಕೈಯಲ್ಲಿ ನೊರೆನೊರೆಯ ಬಿಯರ್ ಗ್ಲಾಸ್ ಹಿಡಿದು ಲ್ಯಾಪ್‌ಟಾಪಿನೆದುರು ಕೂರುತ್ತಿದ್ದೆ; ಶಾದಿ ಡಾಟ್ ಕಾಮ್, ಜೀವನ್ ಸಾಥಿ ಡಾಟ್ ಕಾಮ್‌ನಂಥ ಮೆಟ್ರಿಮೋನಿಯಲ್ ಸೈಟ್ ಓಪನ್ ಮಾಡುತ್ತಿದ್ದೆ. ನಿತ್ಯ ಲಿಸ್ಟ್ ತಯಾರಿಸುತ್ತಿದ್ದೆ, ಯಾರಿಗೆ ಇಮೇಲ್ ಕಳುಹಿಸಬೇಕು, ಯಾರಿಗೆ ಫೋನ್ ಮಾಡಬೇಕು, ಯಾರಿಗೆ ಎಸ್‌ಎಂಎಸ್ ಕಳುಹಿಸಬೇಕು ಎಂದೆಲ್ಲಾ ನೋಟ್ ಮಾಡಿಕೊಳ್ಳುತ್ತಿದ್ದೆ. ನನ್ನೊಂದಿಗೆ ಲಾಲಾ ಇದ್ದ.

ನೋಡಿ, ನೀವೂ ಸಹ ಲಾಲಾನ ಹೆಸರು ಹಿಡಿದಿರಿ! ನಾನೂ ಸಹ ವಂಚನೆಗೊಳಗಾಗಿದ್ದೆ. ಮದುವೆ ಬ್ರೋಕರನ ಹೆಸರು ಸಹ ಲಾಲಾ ಆಗಿತ್ತು. ಅವನು ದಡೂತಿಯಾಗಿದ್ದು, ಸಾರ್‌ಸಾರ್ ಎನ್ನುತ್ತಾ ಅಂಟಿನಂತೆ ಅಂಟಿಕೊಳ್ಳುತ್ತಿದ್ದ. ಅವನೊಬ್ಬ ವಿಚಿತ್ರ ಮನುಷ್ಯನಾಗಿದ್ದ, ತಲೆ ತುಂಬಾ ಕೂದಲಿದ್ದ ಅವನು ಮುಗ್ಧನಂತಿದ್ದು, ಕಡಿಮೆ ಮಾತನಾಡುತ್ತಿದ್ದ. ಮದುವೆ ಮಾಡಿಸುವುದು ಅವನ ವಂಶ